ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತ ಪಡೆದಿದೆ • ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
ಊಟಿರಸ್ತೆ, ಮೈಸೂರು-570 025, ಕರ್ನಾಟಕ
☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 21.04.2016

## ಪ್ರಕಟಣೆ ಕೃಪೆಗಾಗಿ

### ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳಸುವಲ್ಲಿ ಮುಂಚೂಣಿಯಲ್ಲಿರುವ ಜೆಎಸ್‌ಎಸ್ ಸಂಸ್ಥೆ

-ಪ್ರೊ ಎಂ ಕೃಷ್ಣೇಗೌಡ

ಏಪ್ರಿಲ್-21, ಮೈಸೂರು ನಗರದ ಬಿಎನ್ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು (ಸ್ವಾಯತ್ತ) ನಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳು ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮ ಶತಮಾನೋತ್ಸವ ಮತ್ತು ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಅದ್ದೂರಿ ಕಾರ್ಯಕ್ರಮ "ಕಲಾವೈಭವ"ವನ್ನು ಆಯೋಜಿಸಿದ್ದರು.

ಕಲಾವೈಭವವನ್ನು ಉದ್ಘಾಟಿಸಿದ ಪ್ರೊ ಎಂ ಕೃಷ್ಣೇಗೌಡರು 'ಬುದ್ಧಿ ಶ್ರೇಷ್ಠವಾದದ್ದು ಆದರೆ, ಅದೊಂದೇ ಪ್ರಮುಖವಲ್ಲ ಪ್ರೀತಿ-ವಾತ್ಸಲ್ಯ ಭಾವನೆ ವ್ಯಕ್ತಿಯಲ್ಲಿದ್ದಾಗ ಅವನ ಜೀವನ ಪರಿಪೂರ್ಣದೆಡೆಗೆ ಸಾಗುತ್ತದೆ. ಸಾಮಾನ್ಯವಾಗಿರುವುದನ್ನು ಸುಂದರವಾಗಿಸುವ ಕೆಲಸವನ್ನು ಕಲೆ, ಸಂಸ್ಕೃತಿ ಮಾಡುತ್ತವೆ ಎಂದರು. "ಸಂಸ್ಕಾರಗೊಂಡ ಮಣ್ಣು ಮೂರ್ತಿಯಾಗುತ್ತದೆ. ವಿಕಾರಗೊಂಡ ಮೂರ್ತಿ ಮಣ್ಣಾಗುತ್ತದೆ ಎಂದು ಹೇಳಿ ಕಲೆ ಎಂಬುದು ಜೀವನದಲ್ಲಿ ಎಷ್ಟು ಅವಶ್ಯಕ ಎಂಬುದನ್ನು ವಿವರಿಸಿದರು ಹಾಗೂ ಕಲೆಯ ವಿವಿಧ ಆಯಾಮಗಳನ್ನು ತಿಳಿಸಿ ಜೀವನದಲ್ಲಿ ಅದರ ಪಾತ್ರ ಹಿರಿದು ಎಂದು ತಿಳಿಸುತ್ತಾ, ಇಂತಹ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದರಲ್ಲಿ ಜೆಎಸ್‌ಎಸ್ ಸಂಸ್ಥೆ ಯಾವಾಗಲೂ ಮುಂಚೂಣಿಯಲ್ಲಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಂತಾರಾಷ್ಟ್ರೀಯ ಖ್ಯಾತಿಯ ವೈಲಿನ್ ವಿದ್ವಾಂಸರಾದ, ಡಾ ಮೈಸೂರು ಎಂ ಮಂಜುನಾಥ್ ರವರು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಸಾಂಸ್ಕೃತಿಕ ಚಟುವಟಿಕೆಗಳು, ಶೈಕ್ಷಣಿಕ ಚಟುವಟಿಕೆಗಳಷ್ಟೇ ಮಹತ್ವಪೂರ್ಣವಾಗಿವೆ. ಇದಕ್ಕೆ ಜೆಎಸ್‌ಎಸ್ ಸಂಸ್ಥೆ ಅನುವು ಮಾಡಿಕೊಟ್ಟಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕಾ ವಿಭಾಗದ ನಿರ್ದೇಶಕರಾದ ಶ್ರೀ ಎನ್ ಎಂ ಶಿವಶಂಕರಪ್ಪನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಕಲೆ ಮತ್ತು ಸಂಸ್ಕೃತಿಯನ್ನು ವಿದ್ಯಾರ್ಥಿಗಳು ಇಂದಿನ ಸಮಾಜದಲ್ಲಿ ಉಳಿಸಿ ಬೆಳೆಸುವ ಕಾರ್ಯಮಾಡಬೇಕಿದೆ ಎಂದು ತಿಳಿಸಿದರು. ಪ್ರೊ ಬಿ ವಿ ಸಾಂಬಶಿವಯ್ಯ, ಮುಖ್ಯಕಾರ್ಯನಿರ್ವಾಹಕರು ರವರು ಹಾಗೂ ಪ್ರೊ ಎಂ ಮಹದೇವಪ್ಪ, ಪ್ರಾಂಶುಪಾಲರು ರವರು, ಅಕೆಡೆಮಿಕ್ ಡೀನ್ ಸುರೇಶ ರವರು ಪ್ರೊ ಡಿ ಎಸ್ ಸದಾಶಿವಮೂರ್ತಿ, ಕಾರ್ಯದರ್ಶಿ, ಸುವರ್ಣ ಮಹೋತ್ಸವ ಸಮಿತಿ ರವರು, ಮತ್ತು ಕಲಾ ವೈಭವ ಸಂಘಟನಾ ಕಾರ್ಯದರ್ಶಿ, ಪ್ರೊ ಹೆಚ್ ಎಂ ಮಹಾಲಿಂಪ್ಪನವರು ಉಪಸ್ಥಿತರಿದ್ದರು.

ಆರಂಭದಲ್ಲಿ "ಕಲಾವೈಭವ" ವನ್ನು ಕುರಿತ ಕಿರುಚಿತ್ರವನ್ನು ಪ್ರದರ್ಶನ ಮಾಡಲಾಯಿತು. ಕು. ಸಹನ ಮತ್ತು ಕು. ಸುಮ ಪ್ರಾರ್ಥನೆ ಮಾಡಿದರು. ಕು. ಜಾಹ್ನವಿ ಎಸ್ ಸ್ವಾಗತ ಕೋರಿದರು. ಶ್ರೀ ದೊಡ್ಡ ಹಾಲ ಸ್ವಾಮಿರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು ಭಾವನ ಕೆಎಸ್ ವಂದಿಸಿದರು. ಶ್ರೀ ನಂದೀಶ್ ಕುಮಾರ್ ಎಂ ರವರು ಕಾರ್ಯಕ್ರಮವನ್ನು ನಿರೂಪಿಸಿದರು.

(ಪ್ರೊ ಎಂ ಮಹದೇವಪ್ಪ)
ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ
ಸಂಪಾದಕರು

\- - - - - - - - - - -

\- - - - - - - - - - -

ಮೈಸೂರು